ಅ) ಎರಡನೇ ಸುತ್ತಿನ ಸಾಂಧಾನದ ನಂತರ, ಬೈವಾಟರ್ ಸಂಸ್ಥೆಯು ಜೂನ್ 2000ರ ದರಗಳಿಗೆ ಅನ್ವಯಿಸುವಂತೆ ಪ್ರತಿ ಕಿ.ಲೀ.ಗೆ ರೂ. 24.50 ಎಂದು ಅಂತಿಮವಾಗಿ ನಮೂದಿಸಿತ್ತು. ಈ ವಿಷಯವನ್ನು ವಿಶ್ಲೇಷಿಸಿದ ನಂತರ, ನಮೂದಿತ ದರದಲ್ಲಿ ನೀರನ್ನು ಕೊಳ್ಳುವುದು ಆರ್ಥಿಕವಾಗಿ ಹೊರೆಯಾಗುವುದ ಎಂದು ಅಭಿಪ್ರಾಯಪಟ್ಟು ಈ ಯೋಜನೆಯನ್ನು ಜೆ.ಬಿ.ಐ.ಸಿ. ಧನ ಸಹಾಯದೊಂದಿಗೆ ನಿರ್ಮಿಸುವುದು ಉತ್ತಮ: ಕಡಿಮೆ ವೆಚ್ಚದ ಪರ್ಯಾಯವೆಂದು ಅಭಿಪ್ರಾಯ ಪಡಲಾಗಿದೆ. ಇದರಂತೆ, ಕಾವೇರಿ ನೀರು ಸರಬರಾಜು ನಾಲ್ಕನೇ ಘಟ್ಟ ಎರಡನೇ ಹಂತದ ಯೋಜನೆಯನ್ನು ಜೆ.ಬಿ. ಐ.ಸಿ. ಧನ ಸಹಾಯದೊಂದಿಗೆ ಅನುಷ್ಠಾನಗೊಳಿಸಲು ಪರಿಶೀಲಿಸಲಾಗುತ್ತಿದೆ.

ರಾಜ್ಯದ ಜಿಲ್ಲಾ ಮತ್ತು ಕೇಂದ್ರಕಾರಗೃಹಗಳ ಸಾಮರ್ಥ್ಯ

40(35) -ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಜಿಲ್ಲಾ ಕಾರಾಗೃಹಗಳು ಮತ್ತು ಕೇಂದ್ರ ಕಾರಾಗೃಹಗಳಲ್ಲಿ ಕೈದಿಗಳಿಗೆ ಸ್ಥಳಾವಕಾಶದ ಸಾಮರ್ಥ್ಯವೆಷ್ಟು?

ಆ) ಹಾಲಿ ಈ ಕಾರಾಗೃಹಗಳಲ್ಲಿ ಇರುವ ಕೈದಿಗಳ ಸಂಖ್ಯೆ ಎಷ್ಟು? ವಿವರಗಳನ್ನು ನೀಡುವುದು.

ರಾಜ ಅಮರೇಶ್ವರ ನಾಯಕ (ಬಂದೀಖಾನೆ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 6 ಜಿಲ್ಲಾ ಕಾರಾಗೃಹಗಳು ಮತ್ತು 6 ಕೇಂದ್ರ ಕಾರಾಗೃಹಗಳು ಅಸ್ತಿತ್ವದಲ್ಲಿದ್ದು ಜಿಲ್ಲಾ ಕಾರಾಗೃಹಗಳಲ್ಲಿ - 820 ಮತ್ತು ಕೇಂದ್ರ ಕಾರಾಗೃಹಗಳಲ್ಲಿ 5211 ಕೈದಿಗಳಿಗೆ ಸ್ಥಳಾವಕಾಶದ ಸಾಮರ್ಥ್ಯವಿರುತ್ತದೆ.

ಆ) ದಿನಾಂಕ: 15-6-2002ಕ್ಕೆ 6 ಜಿಲ್ಲಾ ಕಾರಾಗೃಹಗಳಲ್ಲಿ 1037 ಕೈದಿಗಳಿರುತ್ತಾರೆ. 6 ಕೇಂದ್ರ ಕಾರಾಗೃಹಗಳಲ್ಲಿ 6175 ಕೈದಿಗಳಿರುತ್ತಾರೆ. (ವಿವರಗಳನ್ನು ಅನುಬಂಧ 'ಅ' ದಲ್ಲಿ ಲಗತ್ತಿಸಿದೆ)

ಕಾರಾಗೃಹವಾರು ವಿವರ ಈ ಕೆಳಕಂಡಂತಿರುತ್ತದೆ.

ಕೈದಿಗಳ ಸಂಖ್ಯೆ

ಜಿಲ್ಲಾ ಕಾರಾಗೃಹಗಳು	ಪುರುಷ	ಮಹಿಳಾ	ಒಟ್ಟು
1) ಬೀದರ್	165	4	169
2) ಕಾರವಾರ	67	3	70
3) ಮಡಿಕೇರಿ	201	7	208
4) ಮಂಗಳೂರು	118	-	118
5) ರಾಯಚೂರು	157	3	160
6) ಶಿವಮೊಗ್ಗ	305	7	312
ಒಟ್ಟು	1013	24	1037

ಕೇಂದ್ರ ಕಾರಾಗೃಹಗಳು	ಪುರುಷ	ಮಹಿಳಾ	ಒಟ್ಟು
1) ಬೆಂಗಳೂರು	2814	71	2885
2) ಬೆಳಗಾವಿ	721	44	765
3) ಬಳ್ಳಾರಿ	438	9	447
4) ಬಿಜಾಪುರ	422	11	433
5) ಗುಲ್ಬರ್ಗಾ	670	15	685
6) ಮೈಸೂರು	893	67	960
ಒಟ್ಟು	5958	217	6175